**8 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು.**

**ಸಿ.ಸಿ.ನಂ.13722/2019**

**ಸಿಡಬ್ಲ್ಯೂ-4, ಪಿಡಬ್ಲ್ಯೂ-2**

| | | |
|---|---|---|
| ಸಾಕ್ಷಿದಾರರ ಹೆಸರು | - | ಕುಮಾರ್ |
| ತಂದೆಯ /ಗಂಡನ ಹೆಸರು | - | ಮಾದೇಗೌಡ |
| ವಯಸ್ಸು | - | 45 ವರ್ಷ |
| ಕೆಲಸ | - | ಕಾವಲುಗಾರ |
| ವಾಸ | - | ಮಲ್ಲೇಶ್ವರಂ, ಬೆಂಗಳೂರು |

**ಸಾಕ್ಷಿಯನ್ನು ದಿನಾಂಕ 22-01-2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸಾರ್ವಜನಿಕ ಅಭಿಯೋಜಕರವರಿಂದಃ**

ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಗೊತ್ತು. ಚಾಸಾ 1 ನನ್ನ ಹೆಂಡತಿ. ಚಾಸಾ 2 ಮತ್ತು 3 ಗೊತ್ತಿಲ್ಲ. ಚಾಸಾ 5 ನನ್ನ ಮಾವ.

ದಿ.17-08-2018 ರಂದು ತಿರುಪತಿಗೆ ಹೋಗಿ ಬರುವಾಗ ಪಕ್ಕದ ಮನೆಯ ನನ್ನ ಸ್ನೇಹಿತ ಫೋನ್ ಮಾಡಿ 4 ಜನರು ಬಂದಿದ್ದು ಅವರು ನಾವು ಸ್ನಾನದ ಉದ್ದೇಶಕ್ಕೆ ಮನೆಯ ಮುಂಭಾಗ ಶೀಟ್ ಹಾಕಿದ್ದಾರೆ ಎಂದು ತಿಳಿಸಿದರು.

ದಿ.28-08-2018 ರಂದು ಬೆಳಿಗ್ಗೆ 08-30 ರಿಂದ 09-00 ಗಂಟೆ ಸಮಯದಲ್ಲಿ ಆರೋಪಿ ನಮ್ಮ ಮನೆಯ ಬಳಿ ಬಂದು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದ್ದು ಎಳೆದಾಡಿದ ಬಗ್ಗೆ ನನಗೆ ಫೋನ್ ಮಾಡಿ ಪಕ್ಕದ ಮನೆಯವರು ತಿಳಿಸಿರುತ್ತಾರೆ. ನಂತರ ಹೋಗಿ ದೂರು ಕೊಟ್ಟಿರುತ್ತೇವೆ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ನಾವು ತಿರುಪತಿಗೆ ದಿ.17-08-2018 ರಂದು ಹೋದ ಬಗ್ಗೆ ಯಾವುದೇ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. 4 ಜನ ಬಂದು ಗೋಡೆ ಮತ್ತು ಶೀಟನ್ನು ಒಡೆದು ಹಾಕಿದ ಬಗ್ಗೆ

ನನ್ನ ಜೊತೆ ಕೆಲಸ ಮಾಡುತ್ತಿದ್ದ ಚಿನ್ನಪ್ಪ ರವರು ರಾತ್ರಿ 02-00 ಗಂಟೆಗೆ ತಿಳಿಸಿದರು. ಆಗ ನಾವು ತಿರುಪತಿಯಲ್ಲಿದ್ದೆವು. ಆಗ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಡುವಂತೆ ಚಿನ್ನಪ್ಪರವರಿಗೆ ತಿಳಿಸಿರುವುದಿಲ್ಲ. ಹಾಗೇ ತಿಳಿಸಲು ತೊಂದರೆ ಇರಲಿಲ್ಲ.

ದಿ.18-08-2018 ರಂದು ತಿರುಪತಿಯಿಂದ ವಾಪಾಸ್ ಬಂದಿರುತ್ತೇವೆ. ಸದರಿ ದಿನ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇವೆ. ಆ ದಿನ ನಾವು ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ 4 ಜನ ಬಂದು ಗೋಡೆ ಮತ್ತು ಶೀಟನ್ನು ಒಡೆದು ಹಾಕಿದ ಬಗ್ಗೆ ಚಿನ್ನಪ್ಪ ನವರು ಫೋನ್ ಮಾಡಿ ನನಗೆ ತಿಳಿಸಿರುತ್ತಾರೆ ಎಂಬ ವಿಷಯವನ್ನು ಹೇಳಿಲ್ಲ ಎಂದರೆ ಸರಿಯಲ್ಲ.

ದಿ.28-08-2018 ರಂದು ಬೆಳಿಗ್ಗೆ 09-00 ಗಂಟೆ ಸಮಯದಲ್ಲಿ ನಾನು ಕೆಲಸಕ್ಕೆ ಹೋಗಿದ್ದು ಚಾಸಾ 1 ರವರನ್ನು ಹಲ್ಲೆ ಮಾಡುತ್ತಿದ್ದ ಬಗ್ಗೆ ನಾನು ನೋಡಿರುವುದಿಲ್ಲ ಎಂದರೆ ಸಾಕ್ಷಿ ನಾನು ಕೆಲಸದಿಂದ ಬರುವಷ್ಟರಲ್ಲಿ ಹೊಡೆಯುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಮಲ್ಲೇಶ್ವರಂ ತಿರುಪತಿ ದೇವಸ್ಥಾನದಲ್ಲಿ ಕಾವಲುಗಾರನಾಗಿ ಕೆಲಸ ಮಾಡುತ್ತಿದ್ದೆ. ನನ್ನ ಕೆಲಸದ ಅವಧಿ ಬೆಳಿಗ್ಗೆ 06-00 ರಿಂದ ಮಧ್ಯಾಹ್ನ 02-00 ಗಂಟೆವರೆಗೆ. ಚಾಸಾ 1 ರವರನ್ನು ಹಲ್ಲೆ ಮಾಡುತ್ತಿದ್ದ ವಿಷಯವನ್ನು ನಮ್ಮ ಪಕ್ಕದ ಮನೆಯವರಾದ ಬೆಟ್ಟೇಗೌಡರವರು ಫೋನ್ ಮಾಡಿ ಬೆಳಿಗ್ಗೆ 09-00 ಗಂಟೆಗೆ ತಿಳಿಸಿರುತ್ತಾರೆ.

ನಮ್ಮ ಮನೆಯಿಂದ ತಿರುಪತಿ ದೇವಸ್ಥಾನ ಅರ್ಧ ಕಿ.ಮೀ.ಗಿಂತ ಹತ್ತಿರವಿದೆ. ಸದರಿ ವಿಷಯವನ್ನು ಪಕ್ಕದ ಮನೆಯವರು ಫೋನ್ ಮಾಡಿ ತಿಳಿಸಿದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿ ನಡುವೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ಸಿವಿಲ್ ವ್ಯಾಜ್ಯ ಇದ್ದ ಕಾರಣ ನನ್ನ ಪತ್ನಿ ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ಪದೇ ಪದೇ ಆರೋಪಿ ವಿರುದ್ಧ ಸುಳ್ಳು ದೂರು ಕೊಡುತ್ತಿರುತ್ತಾರೆ ಎಂದರೆ ಸರಿ. ಈ ದೂರಿಗೂ ಮೊದಲು ನನ್ನ ಪತ್ನಿ ಆರೋಪಿ ವಿರುದ್ಧ 2 - 3 ದೂರು ಕೊಟ್ಟಿದ್ದು ಅದು ವಜಾ ಆಗಿದೆ ಎಂದರೆ ಸರಿ. ನಾನು ಸ್ಥಳಕ್ಕೆ ಬೆಳಿಗ್ಗೆ 09-10 ಗಂಟೆಗೆ ಬಂದೆ. ಆ ಸಮಯದಲ್ಲಿ ಆರೋಪಿ ಒಬ್ಬರೇ ಚಾಸಾ 1 ರವರಿಗೆ ಹಲ್ಲೆ ಮಾಡುತ್ತಿದ್ದರು. ಆಗ ನಾನು ಬಿಡಿಸಲು ಪ್ರಯತ್ನ ಪಟ್ಟರೂ

ಹೊಡೆಯುತ್ತಿದ್ದರು, ಆಗ ಹೋಗಿ ದೂರು ಕೊಟ್ಟೆವು. ಗಲಾಟೆಯಾದ ಸಮಯದಲ್ಲಿ ರಸ್ತೆಯಲ್ಲಿ ಸುಮಾರು ಜನ ಇದ್ದರು. ನಾನು ಹೇಳಿದ ಹಾಗೇ ಯಾವುದೇ ಗಲಾಟೆಯಾಗಿಲ್ಲ ಹಾಗೂ ಯಾವುದೇ ಶೀಟ್ ಅಥವಾ ಗೋಡೆ ಒಡೆದು ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ರವರು ನನ್ನ ಹೆಂಡತಿಯಾದ ಕಾರಣ ಅವರ ಮಾತು ಕೇಳಿ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಸ್ತೆಯಲ್ಲಿ ಯಾವುದೇ ಸಾರ್ಜಜನಿಕರು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿಲ್ಲ , ಹಿಡಿದು ಎಳೆದಾಡಿಲ್ಲ ಹಾಗೂ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ ಒ**

**8 ನೇ ಅ. ಮು. ಮ. ದಂ. ನ್ಯಾ.**